ದಿನಾಂಕಃ 04-03-2026 ರಂದು ಪ್ರಮಾಣ ವಚನ ಭೋದಿಸಲಾಯಿತು.
ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ-

ಆರೋಪಿಯು ನನಗೆ ತುಂಬಾ ಸಮಯದಿಂದಲೂ ಸ್ನೇಹಿತರಾಗಿರುತ್ತಾರೆ. ಆರೋಪಿಯು 2014-15 ನೇ ಇಸವಿಯಿಂದಲೂ ನನಗೆ ಪರಿಚಯಸ್ಥರಿರುತ್ತಾರೆ. ಆರೋಪಿಯು ನನಗೆ ಹಾಗೂ ನನ್ನ ಗಂಡನಿಗೆ ಖುದ್ದಾಗಿ ಪರಿಚಯಸ್ಥರು ಇರುತ್ತಾರೆ. ಆರೋಪಿಯು ಮೊದಲಬಾರಿಗೆ ಯಾವ ದಿನಾಂಕ, ತಿಂಗಳು ಹಾಗೂ ಇಸವಿ ಎಂದು ಭೇಟಿಯಾಗಿರುತ್ತಾರೆ ಎಂದು ನನಗೆ ಈಗ ಹೇಳಲು ನೆನಪಿಲ್ಲ. ಆರೋಪಿಯು ಮೊದಲು ನಮ್ಮ ಮನಗೆ ಬಂದಿದ್ದರು. ಆರೋಪಿಯ ಖಾಯಂ ವಿಳಾಸ ತುರುವೇಹಳ್ಳಿ ಕಡೂರು ತಾಲ್ಲೂಕು ಇರುತ್ತದೆ. ಆದರೆ, ಅವರು ಮೈಸೂರಿನಲ್ಲಿ ವಾಸವಾಗಿರುತ್ತಾರೆ. ಅವರ ನಿಖರವಾದ ವಿಳಾಸ ಅಗ್ರಿಮೆಂಟ್ ನಲ್ಲಿ ಇದ್ದು ನನಗೆ ಹೇಳಲು ಆಗುವುದಿಲ್ಲ. ಆರೋಪಿಯು ನಮ್ಮ ಮನೆಗೆ ಬಂದು ಹೋಗುತ್ತಿದ್ದರು. ನಾನು ಆರೋಪಿಯ ಜೊತೆಗೆ ಕೊನೆಯ ಬಾರಿ 2018 ಮೇ 31 ಅಣ್ಣಾಮಲೈ ಎಸ್.ಪಿ ರವರು ಕರೆಸಿ ತೀರ್ಮಾನ ಮಾಡಿದಂದು ನಾನು ಮಾತನಾಡಿರುತ್ತೇನೆ. ನಂತರ ಆರೋಪಿಗೆ ಫೋನ್ ಮಾಡಿದ್ದೆವು.

ನನ್ನ ಗಂಡ 2019 ಜುಲೈ ನಲ್ಲಿ ಮೃತಪಟ್ಟ ನಂತರ ನಾನು 2 ಬಾರಿ ಆರೋಪಿಗೆ ಫೋನ್ ಮಾಡಿದ್ದೆನು. ಆಗ ಆರೋಪಿಯು ಮೊಬೈಲ್ ನಂಬರ್ ಅನ್ನು ಬದಲಾಯಿಸಿದ್ದು ನಾನು ಫೋನ್ ಮಾಡಿದಾಗ ಅದು ಸ್ವಿಚ್ ಆಫ್ ಎಂದು ಬರುತ್ತಿತ್ತು. ನಾನು ಹೇಳಿದಂತಹ ಸ್ವಿಚ್ ಆಫ್ ಎಂದು ಬರುತ್ತಿದ್ದ ಮೊಬೈಲ್ ನಂಬರ್ ಯಾವುದು ಎಂದು ಈಗ ನನಗೆ ಹೇಳಲು ನೆನಪಿಲ್ಲ.

ಆರೋಪಿಯು ನೀಡಿದ ಚೆಕ್ಕು ಸಿಂಡಿಕೇಟ್ ಬ್ಯಾಂಕಿನ ಚೆಕ್ ಆಗಿದ್ದು ಕೆ.ಆರ್ ಸರ್ಕಲ್ ಮೈಸೂರುಗೆ ಸಂಬಂಧಪಟ್ಟದ್ದು ಇರುತ್ತದೆ. 2014 ರಲ್ಲಿ ಆರೋಪಿಯು ಪೊಲೀಸ್ ಆಗಿ ಡಿಸ್ ಮಿಸ್ ಆಗಿದ್ದರು. ನಂತರ ಅವರು ರಿಯಲ್ ಎಸ್ಟೇಟ್ ಬ್ಯೂಸಿನೆಸ್ ಅನ್ನು ಮಾಡುತ್ತಿದ್ದರು. ಯಾವ ವರ್ಷ ಆರೋಪಿಯು ಡಿಸ್ ಮಿಸ್ ಆಗಿದ್ದರು ಎಂದು ನನಗೆ ಹೇಳಲು ಆಗುವುದಿಲ್ಲ. ಆರೋಪಿಯು ಶೃಂಗೇರಿಯಲ್ಲಿ ಕೆಲಸ ಮಾಡುತ್ತಿದ್ದರು. ಇಸವಿಯನ್ನು ಹೇಳಲು ನನಗೆ ಆಗುವುದಿಲ್ಲ. ಆರೋಪಿಯು ನಮಗೆ ಸಂಬಂಧಿಕರಲ್ಲ. ಆದರೆ, ನಮಗೆ ಫ್ಯಾಮಿಲಿ ಫ್ರೆಂಡ್ ಆಗಿರುತ್ತಾರೆ. ನನ್ನ ಗಂಡ ಪೊಲೀಸ್ ಇಲಾಖೆಯಲ್ಲಿ ಕೆಲಸ ಮಾಡುತ್ತಿರಲಿಲ್ಲ. ಆರೋಪಿಯು ನಮ್ಮ ಊರಿನವರಲ್ಲ. ನನ್ನ ಗಂಡನಿಗೆ ದಯಾಕರ್ ಎನ್ನುವವರು ಪರಿಚಯಸ್ಥರು ಇದ್ದು ಅವರ ಮುಖಾಂತರ ಆರೋಪಿಯ ಪರಿಚಯವಾಗಿದ್ದರು. ದಯಾಕರ್ ರವರು ಹೆಮ್ಮಕ್ಕಿ ಊರಿನವರು ಇರುತ್ತಾರೆ. ಸದರಿ ದಯಾಕರ್ ರವರು ಪೊಲೀಸ್ ಇಲಾಖೆಯಲ್ಲಿ ಇರಲಿಲ್ಲ. ಆರೋಪಿ ಹಾಗೂ ದಯಾಕರ್ ಇಬ್ಬರೂ ನಮ್ಮ ಮನೆಗೆ ಬಂದಿದ್ದರು. ದಯಾಕರ್ ರವರು ಹೆಮ್ಮಕ್ಕಿಯಲ್ಲಿ ವಾಸವಿದ್ದರು. ದಯಾಕರ್ ರವರು ಈಗಲೂ ನಮಗೆ ಪರಿಚಯವಿದ್ದು ವಿಶ್ವಾಸದಿಂದ ಇರುತ್ತಾರೆ.

ನನ್ನ ಗಂಡ ಯಾವುದೇ ಜಮೀನುಗಳ ಬಾಬ್ತು ಬ್ರೋಕರ್ ಕೆಲಸ ಮಾಡುತ್ತಿರಲಿಲ್ಲ. ನನ್ನ ಗಂಡ ಇದ್ದಾಗ ನಮ್ಮ ಆಸ್ತಿಯನ್ನು ನಾವು ಮಾರಾಟ ಮಾಡಿರುತ್ತೇವೆ. ನಮ್ಮ ಜಮೀನನ್ನು ಮಾರಾಟ ಮಾಡುವ ಬಾಬ್ತು ನಾವು ಪೇಪರ್ ನಲ್ಲಿ ನೋಟಿಫಿಕೇಷನ್ ಅನ್ನು ನೀಡಿರುವುದಿಲ್ಲ. ನನ್ನ ಗಂಡ ಬಡ್ಡಿ

ವ್ಯವಹಾರ ಮಾಡುತ್ತಿರಲಿಲ್ಲ. ನನ್ನ ಆದಾಯದ ಮೂಲವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ಆದರೆ, ನಮ್ಮ ಆಸ್ತಿಯನ್ನು ಮಾರಾಟ ಮಾಡಿದ ಬಗ್ಗೆ ದಾಖಲೆ ನಮ್ಮ ಬಳಿ ಇರುತ್ತದೆ. ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ಸದರಿ ಆಸ್ತಿಯನ್ನು 2015 ರಲ್ಲಿ ಮಾರಾಟ ಮಾಡಿರುತ್ತೇನೆ. ನಾವು 3 ರಿಂದ 4 ಎಕರೆ ಆಸ್ತಿಯನ್ನು ಮಾರಾಟ ಮಾಡಿರುತ್ತೇವೆ.

ನಾವು ಆಸ್ತಿಯನ್ನು ಮಾರಾಟ ಮಾಡಿದ ಹಣದಲ್ಲಿ ನಮ್ಮ ಜೀವನವನ್ನು ನಡೆಸುತ್ತಿದ್ದೆವು. ನಮ್ಮ ಸ್ವಂತ ಊರು ಬಾಳೂರು ಹೋಬಳಿ, ಗಬ್ ಗಲ್ ಪೋಸ್ಟ್, ನಿಡ್ಡನಹಳ್ಳಿ  ಇರುತ್ತದೆ. 2015 ರಲ್ಲಿ ನಾವು ಚಿಕ್ಕಮಗಳೂರಿಗೆ ಬಂದಿರುತ್ತೇವೆ. ನನ್ನ ಗಂಡನ ಜೀವಿತಾವಧಿಯಲ್ಲಿ ಗಬ್ ಗಲ್ ಪೋಸ್ಟ್, ನಿಡ್ಡನಹಳ್ಳಿಯ ಮನೆಗೆ ಆರೋಪಿಯು ತುಂಬಾ ಸಲ ನಮ್ಮ ಮನೆಗೆ ಬಂದು ಹೋಗಿದ್ದರು. ಆರೋಪಿಯ ಮಾವ ಶಿಕ್ಷಕರಾಗಿ ಕೆಲಸ ಮಾಡುತ್ತಿದ್ದರು. ಅದನ್ನು ಹೊರತುಪಡಿಸಿ ಉಳಿದ ಸಂಬಂಧಿಕರ ಬಗ್ಗೆ ನನಗೆ  ಗೊತ್ತಿಲ್ಲ. ಆರೋಪಿಗೆ ಹೆಂಡತಿ ಇರುವುದರ ಬಗ್ಗೆ ನನಗೆ ಗೊತ್ತಿರುತ್ತದೆ. ಆದರೆ ಸಂಪೂರ್ಣ ವಿಚಾರ ನನಗೆ ಗೊತ್ತಿಲ್ಲ. ಆರೋಪಿಯ ಮನೆಯಲ್ಲಿ ಯಾರೆಲ್ಲಾ ವಾಸವಿದ್ದರು ಎಂದು ಈಗ ನನಗೆ ಹೇಳಲು ಆಗುವುದಿಲ್ಲ.

ಆರೋಪಿಯು 2015 ರಲ್ಲಿ  ನಮ್ಮ ಬಳಿ ಹಣವನ್ನು ಕೇಳಿರುತ್ತಾರೆ. ಆದರೆ, ದಿನಾಂಕವನ್ನು ಹೇಳಲು ನನಗೆ ನೆನಪಿಲ್ಲ. 2015 ರಲ್ಲಿ ಆರೋಪಿಗೆ ಹಣ ನೀಡಿದ್ದು ಆದರೆ ದಿನಾಂಕ ಹೇಳಲು ನನಗೆ ನೆನಪಿಲ್ಲ. ಆರೋಪಿಯು ಹಣವನ್ನು ಕೇಳಿದ 10 - 15 ದಿನಗಳ ನಂತರ ಹಣವನ್ನು ಆರೋಪಿಗೆ

ನೀಡಿರುತ್ತೇವೆ. ಆದರೆ, ನಿಖರವಾಗಿ ಎಷ್ಟು ದಿನಗಳ ನಂತರ ಎಂದು ನನಗೆ ಹೇಳಲು ಆಗುವುದಿಲ್ಲ.

ಆರೋಪಿಯು ಹಣವನ್ನು ಪಡೆದುಕೊಂಡಿದ್ದಾರೆ ಎಂದು ಹೇಳಲಾದ ಸಮಯದಲ್ಲಿ ಮೈಸೂರಿನಲ್ಲಿ ವಾಸವಾಗಿದ್ದರು. ಸದರಿ ಹಣದ ವ್ಯವಹಾರ ಆದಾಗ ದಯಾಕರ್ ಎನ್ನುವವರು ಕೂಡಾ ಇದ್ದರು. ನಾನು, ನನ್ನ ಗಂಡ ಹಾಗೂ ದಯಾಕರ್ ಇದ್ದೆವು. ನಾನು ಎಸ್.ಎಸ್.ಎಲ್.ಸಿ ಓದಿರುತ್ತೇನೆ. ನನ್ನ ಗಂಡ ಕೂಡಾ ಎಸ್.ಎಸ್.ಎಲ್.ಸಿ ಓದಿರುತ್ತಾರೆ. ನಮಗೆ ಬಿ.ಪಿ.ಎಲ್ ಕಾರ್ಡ್ ಇರುತ್ತದೆ. ಈ ಪ್ರಕರಣವನ್ನು ದಾಖಲು ಮಾಡುವ ಸಮಯದಲ್ಲಿ ನಮ್ಮ ವಕೀಲರಿಗೆ ಎಲ್ಲಾ ವಿಷಯವನ್ನು ತಿಳಿಸಿರುತ್ತೇವೆ. ನನಗೂ ಹಾಗೂ ನನ್ನ ಗಂಡನಿಗೆ ಬ್ಯಾಂಕ್ ವ್ಯವಹಾರದ ಬಗ್ಗೆ ಗೊತ್ತಿರುತ್ತದೆ. ಹಣಕಾಸಿನ ವ್ಯವಹಾರದ ಬಗ್ಗೆ ಹಾಗೂ ಚೆಕ್ಕಿನ ವ್ಯವಹಾರದ ಬಗ್ಗೆ ನಮಗೆ ಗೊತ್ತಿತ್ತು. ಯಾವುದೇ ಹಣದ ವ್ಯವಹಾರದಲ್ಲಿ 50 ಸಾವಿರಕ್ಕಿಂತ ಮೇಲ್ಪಟ್ಟು ವ್ಯವಹಾರ ಇದ್ದಾಗ ಚೆಕ್ಕು ಮೂಲಕ ಮಾಡಬೇಕು ಎಂದರೆ ಸರಿ. ನಾವೂ ಕೂಡಾ ಹಣಕಾಸಿನ ವ್ಯವಹಾರವನ್ನು ಬ್ಯಾಂಕ್ ಮೂಲಕ ಮಾಡುತ್ತೇವೆ ಎಂದರೆ ಸರಿ. ಹಣಕಾಸಿನ ವ್ಯವಹಾರ ಆದಾಗ ದಯಾಕರ್ ಎನ್ನುವವರು ಇದ್ದ ಬಗ್ಗೆ ನಮ್ಮ ಹಿಂದಿನ ವಕೀಲರಿಗೆ ತಿಳಿಸಿರುತ್ತೇವೆ. ಆದರೆ, ಈಗಿನ ವಕೀಲರಿಗೆ ತಿಳಿಸಿರುವುದಿಲ್ಲ. ನನಗೆ ಸ್ವಲ್ಪ Tension ಇದ್ದುದರಿಂದ ಈಗಿನ ವಕೀಲರಿಗ ತಿಳಿಸಿರುವುದಿಲ್ಲ.

ಆರೋಪಿಯು ಯಾವ ವಿಚಾರಕ್ಕೆ ಪೊಲೀಸ್ ಇಲಾಖೆಯಿಂದ Dismiss ಆಗಿದ್ದರು ಎಂದು ನನಗೆ ಹೇಳಲು ಆಗುವುದಿಲ್ಲ. ಯಾವ ಕಾರಣಕ್ಕಾಗಿ ಆರೋಪಿಯು Dismiss ಆಗಿದ್ದರು ಎಂದು ನನ್ನ ಗಂಡ ಕೇಳಿ

ತಿಳಿದುಕೊಂಡಿರಬಹುದು. ಆದರೆ, ನಾನು ತಿಳಿದುಕೊಂಡಿರುವುದಿಲ್ಲ. ನನ್ನ ಗಂಡ ಆ ವಿಚಾರ ನನ್ನ ಜೊತೆ ಮಾತನಾಡಿರುವುದಿಲ್ಲ. ದಯಾಕರ್ ರವರ ಮೂಲಕ ಆರೋಪಿಯು ನನ್ನ ಗಂಡನಿಗೆ ಪರಿಚಯವಾಗಿದ್ದರು. ದಯಾಕರ್ ಪರಿಚಯ ಮಾಡುವ ಪೂರ್ವದಲ್ಲಿ ಆರೋಪಿಯ ಪರಿಚಯ ನಮಗೆ ಇರಲಿಲ್ಲ. ನಾನು ದಯಾಕರ್ ರವರಲ್ಲಿ ಆರೋಪಿಯು Dismiss ಆಗಿರುವ ಬಗ್ಗೆ ಕೇಳಿ ತಿಳಿದುಕೊಂಡಿರುವುದಿಲ್ಲ. ಆರೋಪಿಯು ಮೈಸೂರಿನಲ್ಲಿ ರಿಯಲ್ ಎಸ್ಟೇಟ್ ಮಾಡುವ ಬಗ್ಗೆ ಹೇಳಿದ್ದರು. ಆದರೆ ರಿಯಲ್ ಎಸ್ಟೇಟ್ ವ್ಯವಹಾರ ಎಲ್ಲಿ ಮಾಡುತ್ತಿದ್ದರು ಎಂದು ನಿಖರವಾಗಿ ಹೇಳಲು ನನಗೆ ಆಗುವುದಿಲ್ಲ. ಆರೋಪಿಯು ರಿಯಲ್ ಎಸ್ಟೇಟ್ ವ್ಯವಹಾರ ಮಾಡುತ್ತಿದ್ದ ಬಗ್ಗೆ ನಮ್ಮ ಮುಂದೆ ದಾಖಲೆ ನೀಡಿರುವುದಿಲ್ಲ.

(ಮುಂದುವರಿದ ಪಾಟೀ ಸವಾಲಿಗೆ ಆರೋಪಿ ಪರ ವಕೀಲರು ಕಾಲಾವಕಾಶ ಕೋರಿದ್ದು ಕಾಲಾವಕಾಶ ನೀಡಿದೆ).

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)
ಓಃಹೇಃಕೇಃಸಃಇಃಎಃಓಃ

ಸಹಿ/-
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ಮತ್ತು ಸಿ.ಜೆ.ಎಂ.,ಚಿಕ್ಕಮಗಳೂರು.

ಎಸ್ಆರ್ಃ

C.C.No.67/2021
PW-1